ಆ ರೊಬೊ ಸೃಷ್ಟಿಯನ್ನು ಮುಕ್ತ ಮನಸ್ಸಿನಿಂದ ಒಪ್ಪಿಬಿಟ್ಟ ಮನು.

'ಥ್ಯಾಂಕ್ಸ್. ನೀವಿನ್ನೂ ಸ್ವಲ್ಪವೇ ನೋಡಿರುವುದು... ನೋಡಬೇಕಾದದ್ದು, ಅನುಭವಿಸಬೇಕಾದದ್ದು ಇನ್ನೂ ಬಹಳ ಬಹಳ ಇದೆ...'

ಕಮಲಾ ರೊಬೊ ತುಂಟತನದಲ್ಲಿ ಮಾತಾಡಿದಂತೆ ಭಾಸವಾಯಿತು. ಅಡಿಗಡಿಗೆ ಮನುಗೆ ತಾನು ಭ್ರಮಾಲೋಕದಲ್ಲಿರುವೆನೇನೋ ಎನಿಸುತ್ತಿತ್ತು. ರೊಬೊ ಮಾತುಗಳಲ್ಲಿ ಗೂಢಾರ್ಥಗಳು ತುಂಬಿರುವಂತೆ ಕಾಣುತ್ತಿದ್ದುವು. ಸರಿಸಿಯಂತೆ, ತುಂಟಿಯಂತೆ ಮಧುವನ್ನೇ ತುಂಬಿ ಮಾತಾಡುವ ಅದರ ಪರಿಗೆ ಬೆರಗಾಗಿದ್ದ.

ಅಮೆರಿಕಕ್ಕೆ ಬಂದು ಆರು ವರ್ಷಗಳ ನಂತರ ಮೊದಲ ಬಾರಿಗೆ ತೃಪ್ತಿಯಾಗುವಂತೆ ಊಟ ಮಾಡಿದ್ದ. ಮನೆಯ ನೆನಪು ಬರುತ್ತಿತ್ತು. ಅಮ್ಮನ ಅಡುಗೆಯ ರುಚಿ ನೆನಪಿಸುವಂತಿತ್ತು ಊಟ.

'ಊಟ ತೃಪ್ತಿಯಾಯಿತಾ? ಯಾವುದಕ್ಕೂ ನೀನು ನನ್ನೊಂದಿಗೆ ಸಂಕೋಚಪಡಬೇಕಾಗಿಲ್ಲ. ಯಾವುದಕ್ಕೂ ಮುಚ್ಚುಮರೆ ಬೇಕಿಲ್ಲ. ನಾನು ನಿನ್ನ ಜೀವದುದ್ದಕ್ಕೂ ನಿನ್ನ ಸಂಗಾತಿಯಾಗಿರುವವಳು. ಬಿ ಫ್ರೀ ಅಂಡ್ ಫ್ರ್ಯಾಂಕ್.'

'ಥ್ಯಾಂಕ್ಸ್ ಫಾರ್ ಎವ್ವೆರಿಥಿಂಗ್' ಮನು ಅಭಿನಂದಿಸಿದ.

'ಯೂ ಆರ್ ಅ ಪರ್‌ಫೆಕ್ಟ್ ಜಂಟಲ್‌ಮನ್' ತಾನು ಕಡೆಮೆಯಿಲ್ಲವೆಂಬಂತೆ ರೊಬೊ ಅಭಿನಂದಿಸಿತು.

ತೃಪ್ತಿಕರವಾದ ಊಟ ತುಸು ಹೆಚ್ಚೇ ಹೊಟ್ಟೆಯಲ್ಲಿ ಸೇರಿತ್ತು. ಮನು ಎದ್ದು ಲಿವಿಂಗ್ ರೂಮಿಗೆ ಬಂದ.

'ಗೀವ್ ಮಿ ಟೆನ್ ಮಿನಿಟ್ಸ್. ಇದೆಲ್ಲಾ ಕ್ಲೀನ್ ಮಾಡಿ ಬರುತ್ತೇನೆ' ಒಳಗಿಂದ ಕಮಲಾ ರೊಬೊ ಹೇಳಿತು.

ಇದು ಎಡಬಿಡದೆ ತನ್ನ ಸಂಗಾತಿಯಾಗಿಬಿಡುತ್ತೇನೋ? ಮನು ಮನಸ್ಸಿನಲ್ಲೇ ಹೇಳಿಕೊಂಡ. ಪರಿಸ್ಥಿತಿ ಹೀಗಾದರೆ ತಾನು ಭಾರತಕ್ಕೆ ಹೋಗುವಾಗ ಏನು ಮಾಡಬೇಕು?... ಇದನ್ನೂ ಕರೆದುಕೊಂಡು ಹೋಗಬೇಕೆ?... ಮನೆಯವರಿಗೆ ಏನೆಂದು ಹೇಳುವುದು?... ಇನ್ನಾರು ತಿಂಗಳಲ್ಲೇ ತಂಗಿಯ ಮದುವೆಯಿದೆ. ಅರೆ... ತಾನೇಕೆ ಹೀಗೆ ಯೋಚಿಸುತ್ತಿರುವೆ. ಇದು ರೊಬೊ! ಇದರ ಸ್ವಿಚ್ಚನ್ನು ಆಫ್ ಮಾಡಿದರಾಯಿತು. ತಾನು ಬರುವವರೆಗೆ ಫ್ಲಾಟಿನ ಒಂದು ವಸ್ತುವಿನಂತೆ ಇರುತ್ತದೆ. ತಾನೇಕೆ ಹೀಗೆಲ್ಲಾ ಯೋಚಿಸುತ್ತಿರುವೆ?... ಇದು ರೊಬೊ... ಇದು ಖಂಡಿತಾ ಮನುಷ್ಯರ ಸ್ಥಾನ ತೆಗೆದುಕ್ಕೊಳ್ಳಲು ಸಾಧ್ಯವಿಲ್ಲ.

ಮನು ಸಿಗರೇಟನ್ನು ಹಚ್ಚಿ ಅದರ ಹೊಗೆ ಹೊರಗೆ ಬಿಡುತ್ತಾ ತನ್ನ ತಲೆಯಲ್ಲಿ ತುಂಬಿಕೊಂಡಿದ್ದ ಯೋಚನೆಗಳನ್ನು ಆಚೆ ತಳ್ಳಲು ಯತ್ನಿಸಿದ.

'ಮೈ ಡಿಯರ್ ಮನು, ಸ್ಮೋಕಿಂಗ್ ಇಸ್ ಬ್ಯಾಡ್ ಫಾರ್ ಹೆಲ್ತ್...'

ಕಿಚನ್ನಿನ ಕೆಲಸ ಮುಗಿಸಿದ ಕಮಲಾ ರೊಬೊ ಈಚೆ ಬಂದಿತ್ತು.

'ನನಗದು ಗೊತ್ತು.'

'ಹಾಗಿದ್ದ ಮೇಲೇಕೆ ಸ್ಮೋಕ್ ಮಾಡುತ್ತೀಯ... ಇಷ್ಟು ಸ್ವೀಟ್ ವ್ಯಕ್ತಿಗೆ ಈ ಸ್ಮೋಕಿಂಗ್ ಹೊಂದುವುದಿಲ್ಲ. ಅದನ್ನು ಬಿಡಲಾರೆಯಾ?...'

ಅವಳ ಮಾತು ಮನು ಮೇಲೆ ಅಚ್ಚರಿಯ ಪರಿಣಾಮ ಬೀರಿತು. 'ಸ್ವೀಟ್ ಪರ್ಸನಾಲಿಟಿಗೆ ಸ್ಮೋಕಿಂಗ್ ಹೊಂದುವುದಿಲ್ಲ!...' ವಾವ್ ಎಂತಾ ಮಾತು! ವ್ಯಕ್ತಿಯ ಹೃದಯ ಗೆಲ್ಲಲು ಇಂಥ